ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ________ ದಿನಾಂಕ : DATE 20/2/

# ದಿಶಾಗೆ ಮತ್ತೆ 3 ದಿನ ಜೈಲು

## ಸಾಕ್ಷ್ಯ ತಿರುಚುವ ಅಪಾಯ ಸಾಧ್ಯತೆ: ದೆಹಲಿ ಪೊಲೀಸ್

**ನವದೆಹಲಿ:** ರೈತ ಪ್ರತಿಭಟನೆಗೆ ಸಂಬಂಧಿಸಿದಂತೆ ವಿವಾದಿತ ಟೂಲ್‌ಕಿಟ್ ಎಡಿಟ್ ಮಾಡಿರುವ ಆರೋಪ ಹೊತ್ತಿರುವ 'ಬೆಂಗಳೂರಿನ ಹೋರಾಟಗಾರ್ತಿ ದಿಶಾ ರವಿಯನ್ನು ಮತ್ತೆ 3 ದಿನ ನ್ಯಾಯಾಂಗ ಬಂಧನಕ್ಕೆ ಗುರಿಪಡಿಸಲಾಗಿದೆ.

'ಸಾಕ್ಷ್ಯಗಳನ್ನು ತಿರುಚುವ ಅಪಾಯ ಅಧಿಕವಿದೆ' ಎಂದು ದೆಹಲಿ ಪೊಲೀಸರು ತೀವ್ರವಾಗಿ ಶಂಕಿಸಿದ್ದರಿಂದಾಗಿ ಪಟಿಯಾಲ ಹೌಸ್ ಕೋರ್ಟ್ ಶುಕ್ರವಾರ ಈ ತೀರ್ಪು ಪ್ರಕಟಿಸಿದೆ. 'ತನಿಖೆಗೆ ಹಾಜರಾಗುವಂತೆ ಮತ್ತ ಕೆಲವರಿಗೆ ನೋಟೀಸ್ ನೀಡಿದ್ದೇವೆ. ಈ ಪ್ರಕರಣದಲ್ಲಿ ಶಂತನು ಸಹ ನೋಟೀಸ್ ನೀಡಲಾಗಿದೆ. ದಿಶಾ ಮತ್ತು ಶಂತನು ಅವರನ್ನು ಮುಖಾಮುಖಿಯಾಗಿಸಿ, ಹೆಚ್ಚಿನ ವಿಚಾರಣೆ ನಡಸಬೇಕಿದೆ' ಎಂದು ಪೊಲೀಸರು ವಾದಿಸಿದ್ದರು.

**ಮಾಧ್ಯಮಗಳಿಗೆ ಸೂಚನೆ:** ಏತನ್ಮಧ್ಯೆ, ದಿಶಾ ಪ್ರಕರಣದಲ್ಲಿ ಸಂವೇದನಾಶೀಲತೆ ಕಾಯ್ದುಕೊಳ್ಳುವಂತೆ ದೆಹಲಿ ಹೈಕೋರ್ಟ್ ಮಾಧ್ಯಮಗಳಿಗೆ ಸೂಚಿಸಿದೆ. 'ಅತ್ಯಂತ ಸೂಕ್ಷ್ಮವಾಗಿರುವ ಈ ಪ್ರಕರಣದ ವರದಿ ಮಾಡುವಾಗ ಅಧಿಕೃತ ಮೂಲಗಳನ್ನಷ್ಟೇ ಪರಿಗಣಿಸಬೇಕು' ಎಂದೂ ನಿರ್ದೇಶಿಸಿದೆ. ಪ್ರಕರಣ ಸಂಬಂಧ ಮಾಧ್ಯಮಗಳಿಗೆ ಯಾವುದೇ ತನಿಖಾ ಮಾಹಿತಿಗಳನ್ನು ಸೋರಿಕೆ ಮಾಡಬಾರದು ಎಂದು ದೆಹಲಿ ಪೊಲೀಸರಿಗೆ ಸೂಚಿಸಿದೆ.

ಮಾಧ್ಯಮಗಳಿಗೆ ಪೊಲೀಸರು ತನಿಖಾ ಮಾಹಿತಿ ಸೋರಿಕೆ ಮಾಡಬಾರದು, ಮಾಧ್ಯಮಗಳು ಖಾಸಗಿ ಚಾಟ್‌ಗಳನ್ನು ವರದಿಮಾಡಬಾರದು ಎಂದು ದಿಶಾ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ದಿಶಾಳ ಆರೋಪವನ್ನು ದೆಹಲಿ ಪೊಲೀಸರು ಸಂಪೂರ್ಣವಾಗಿ ತಳ್ಳಿಹಾಕಿದ್ದಾರೆ.

### ಅಪಪ್ರಚಾರ: ಪಾಕ್‌ಗೆ ಟರ್ಕಿ ಸಾಥ್

ರೈತ ಪ್ರತಿಭಟನೆಗೆ ಬೆಂಬಲಿಸಿ ಭಾರತದ ವಿರುದ್ಧ ಅಪಪ್ರಚಾರದ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ಜತೆಗೆ ಟರ್ಕಿಯ ಕೈವಾಡವೂ ಇದೆ ಎಂದು 'ಗ್ರೀಕ್ ಸಿಟಿ ಟೈಮ್ಸ್' ವರದಿ ಸ್ಫೋಟಿಸಿದೆ. ಪಾಕ್‌ನ ಐಎಸ್‌ಐ ಬೆಂಬಲ ಪಡೆದಿರುವ ಹಲವು ಕಾಶ್ಮೀರಿ ಪತ್ರಕರ್ತರು ಟರ್ಕಿಯಲ್ಲಿ ಬೀಡುಬಿಟ್ಟಿದ್ದಾರೆ. ಅಲ್ಲಿಂದಲೇ ಸಾಮಾಜಿಕ ಜಾಲತಾಣಗಳ ಮೂಲಕ ಅಪಪ್ರಚಾರ ಕೃತ್ಯ ಕೈಗೊಂಡಿದ್ದಾರೆ ಎಂದು ವರದಿ ಹೇಳಿದೆ. ಇದಕ್ಕೆ ಪೂರಕವಾಗಿ ಕಾಶ್ಮೀರದ ಅಲಿ ಕೆಸ್ಕಿನ್ ಎಂಬಾತ, 'ಪಾಕಿಸ್ತಾನ ಏಕಾಂಗಿ ಅಲ್ಲ' ಎಂದು ಟರ್ಕಿಯ ರಾಷ್ಟ್ರಧ್ವಜ ಹಾಕಿಕೊಂಡಿರುವ ಪೋಸ್ಟನ್ನೂ ವರದಿ ಸಾಕ್ಷ್ಯವಾಗಿ ತೋರಿಸಿದೆ.

ವಾದಕ್ಕೆ ಕಿವಿಗೊಟ್ಟ ಹೈಕೋರ್ಟ್ ಪೀಠ, ಈ ವಿಚಾರದಲ್ಲಿ ಮಾಧ್ಯಮಗಳ ಸ್ವಾತಂತ್ರ್ಯ ತಡೆಯಲೂ ನಿರಾಕರಿಸಿದೆ.

**152 ಮಂದಿ ಅರೆಸ್ಟ್:** ಜ.26ರ ಕೆಂಪುಕೋಟೆ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇದುವರೆಗೆ 152 ಮಂದಿಯನ್ನು ಬಂಧಿಸಲಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

**ಬಾಘ್ಪಾಗೆ ಪ್ರಿಯಾಂಕಾ:** ಮುಝಫರ್‌ನಗರದಲ್ಲಿ ಶನಿವಾರ ರೈತ ಪ್ರತಿಭಟನಾಕಾರರು ಏರ್ಪಡಿಸಿರುವ ಕಿಸಾನ್ ಪಂಚಾಯತ್‌ನಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ ಪಾಲ್ಗೊಳ್ಳಲಿದ್ದಾರೆ.

# ಕ್ಷಮಾದಾನ ಅರ್ಜಿ ಸಲ್ಲಿಸಿದ ಶಬನಮ್

**ನವದೆಹಲಿ:** ಗಲ್ಲು ಶಿಕ್ಷೆಗೆ ಒಳಗಾಗುತ್ತಿರುವ ದೇಶದ ಮೊದಲ ಮಹಿಳೆ ಎಂಬ ಕುಖ್ಯಾತಿಗೆ ಒಳಗಾಗಿರುವ ಶಬನಮ್, ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಅವರಿಗೆ ಕ್ಷಮಾದಾನ ಅರ್ಜಿ ಸಲ್ಲಿಸಿದ್ದಾಳೆ.

ಅದಲ್ಲದೆ, ಆಕೆಯ 12 ವರ್ಷದ ಪುತ್ರ ಮೊಹಮ್ಮದ್ ತಾಜ್ ಕೂಡಾ ರಾಷ್ಟ್ರಪತಿಯವರಿಗೆ ಅರ್ಜಿ ಸಲ್ಲಿಸಿ ತನ್ನ ತಾಯಿಗೆ ಕ್ಷಮೆ ನೀಡುವಂತೆ ಕೋರಿದ್ದಾನೆ. ತನ್ನ ಪ್ರಿಯತಮನ ಜೊತೆ ಮದುವೆ ಮಾಡಲು ಒಪ್ಪಲಿಲ್ಲ ಎಂಬ ಕಾರಣಕ್ಕೆ 2008ರ ಏಪ್ರಿಲ್‌ನಲ್ಲಿ ಶಬನಮ್, ತನ್ನ ಪ್ರಿಯಕರನ ಜೊತೆ ಸೇರಿ ತನ್ನದೇ ಕುಟುಂಬದ 7 ಜನರನ್ನು ಹತ್ಯೆಗೈದಿದ್ದಳು. ಅದೇ ಕಾರಣಕ್ಕೆ ಆಕೆಗೆ ಗಲ್ಲು ಶಿಕ್ಷೆ ವಿಧಿಸಲಾಗಿದ್ದು, ಸುಪ್ರೀಂ ಕೋರ್ಟ್ ಕೂಡ ಆಕೆಯ ಶಿಕ್ಷೆಯನ್ನು ಎತ್ತಿ ಹಿಡಿದಿತ್ತು. ರಾಷ್ಟ್ರಪತಿಯವರಿಗೆ ಆಕೆ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯೂ ವರ್ಷಗಳ ಹಿಂದೆಯೇ ವಜಾಗೊಂಡಿತ್ತು.